ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಚೆಕ್‌ಪೋಸ್ಟ್‌ಗಳಿಂದ ಬರತಕ್ಕ ಹಣ ೫ ಕೋಟಿ ರೂಪಾಯಿ ಮತ್ತು ಖರ್ಚಾಗತಕ್ಕ ಹಣ ೨.೫ ಕೋಟಿ ರೂಪಾಯಿಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕಳ್ಳಭಟ್ಟಿ ಪ್ರಕರಣಗಳು

೨೭೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಆರ್ಥಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೮–೮೯, ೧೯೮೯–೯೦ರಲ್ಲಿ ಪತ್ತೆ ಹಚ್ಚಿದ ಕಳ್ಳಭಟ್ಟಿ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಪ್ರತಿ ವರ್ಷ ಎಷ್ಟು ಕಳ್ಳಭಟ್ಟಿಗಳನ್ನು ನಾಶ ಮಾಡಲಾಗಿದೆ ?

ಇ) ಪತ್ತೆ ಹಚ್ಚಿದ ಎಷ್ಟು ಪ್ರಕರಣಗಳ ಬಗ್ಗೆ ದಾವೆ ಹೂಡಲಾಗಿದೆ ಮತ್ತು ಎಷ್ಟು ಜನರಿಗೆ ಶಿಕ್ಷೆ ಆಗಿದೆ ?

ಈ) ಕಳ್ಳಭಟ್ಟಿ ನಿರ್ಮೂಲನಕ್ಕೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ವಿತ್ತ ಮಂತ್ರಿಗಳು).—

ಅ) ೧೯೮೮–೮೯ — ೩೦೦
೧೯೮೯–೯೦ — ೧೬೫

ಆ) ೧೯೮೮–೮೯ — ೭೭೫೯ ಲೀಟರ್‌ಗಳು
೧೯೮೯–೯೦ — ೮೨೯೬ ಲೀಟರ್‌ಗಳು
೧೯೯೦ ಏಪ್ರಿಲ್ ಅಂತ್ಯದವರೆಗೆ

ಇ) ದಾವೆಗಳ ಸಂಖ್ಯೆ
೧೯೮೮–೮೯ — ೧೩೮ ದಾವೆ
೧೯೮೯–೯೦ — ೧೬೧ ದಾವೆ

ಶಿಕ್ಷೆಗೆ ಗುರಿಪಡಿಸಿರುವವರ ಸಂಖ್ಯೆ
೧೯೮೮–೮೯ — ಇಲ್ಲ
೧೯೮೯–೯೦ — ಇಲ್ಲ

ಈ) ಕಳ್ಳಭಟ್ಟಿ ಕೇಂದ್ರಗಳ ಮೇಲೆ ದಾಳಿಗಳನ್ನು ಮಾಡಲು ಆದೇಶ ನೀಡಲಾಗಿದೆ. ಆದರಂತೆ ದಾಳಿಗಳನ್ನು ಮೇಲಿಂದ ಮೇಲೆ ಏರ್ಪಡಿಸಲಾಗುತ್ತಿದೆ. ಅಬಕಾರಿ ಅಪರಾಧಗಳಲ್ಲಿ ಸಿಗತಕ್ಕಂತಹ ವಾಹನಗಳನ್ನು ಮತ್ತು ಇನ್ನಿತರ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೋಸರ ಅಬ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವುದಕ್ಕೋಸ್ಕರ ಕರ್ನಾಟಕ ಅಬಕಾರಿ ಕಾಯಿದೆಗೆ ತಿದ್ದುಪಡಿಯನ್ನು ತರಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ ನಾನು ಕೇಳಿದ ಪ್ರಶ್ನೆ ಎಂದರೆ ''ಪತ್ತೆ ಹಚ್ಚಿದ ಎಷ್ಟು ಪ್ರಕರಣಗಳ ಬಗ್ಗೆ ದಾವೆ ಹೂಡಲಾಗಿದೆ ಮತ್ತು ಎಷ್ಟು ಜನರಿಗೆ ಶಿಕ್ಷೆ ಆಗಿದೆ'' ಎಂದು. ಅದಕ್ಕೆ ತಮ್ಮ ಉತ್ತರ ೧೯೮೮–೮೯ರ ಸಾಲಿನಲ್ಲಿ ೧೩೮ ದಾವೆ ಮತ್ತು ೧೯೮೯–೯೦ರ ಸಾಲಿನಲ್ಲಿ ೧೬೧ ದಾವೆಗಳನ್ನು ಹೂಡಲಾಗಿದೆ ಎಂದು ಅಷ್ಟನ್ನೇ ಹೇಳಿದ್ದೀರಿ. ಆದರೆ ೮೮–೮೯ ಮತ್ತು ೮೯–೯೦ರ ಸಾಲಿನಲ್ಲಿ ಯಾರಿಗೂ ಶಿಕ್ಷೆಯೇ ಆಗಿಲ್ಲವೆಂದು ಹೇಳಿದ್ದೀರಿ. ಕೇವಲ ಶಿಕ್ಷೆ ಕೊಟ್ಟರೆ ಕಳ್ಳಭಟ್ಟಿ ಪ್ರಕರಣಗಳೆಲ್ಲಾ ನಿಂತು ಹೋಗುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಶಿಕ್ಷೆ ಮಾಡುವುದರಿಂದ ಕಳ್ಳಭಟ್ಟಿ ತಯಾರಿಸುವವರಿಗೆ ಸ್ವಲ್ಪ ಮಟ್ಟಿನ ಭಯ ಇರುತ್ತದೆಂಬ ಕಾರಣಕ್ಕಾಗಿ ನಾನು ಕೇಳಿರತಕ್ಕದ್ದು. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಸಾದಿ ಅರೇಬಿಯಾದಲ್ಲಿ ಕದ್ದವರ ಕೈಯನ್ನು ಕಡಿಯುತ್ತಾರೆ, ವ್ಯಭಿಚಾರ ಮಾಡಿದವರನ್ನು ಬೀದಿಯಲ್ಲಿ ನಿಲ್ಲಿಸಿ ಕಲ್ಲಿನಿಂದ ಹೊಡೆಯುತ್ತಾರೆ. ಆದೇ ರೀತಿ ಸಮ್ಮಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವವರಿಗೆ ಕೈಯನ್ನು ಕಡಿಯುವ ಬಗ್ಗೆ ಯೋಚನೆಯನ್ನು ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಶಿಕ್ಷೆ ಕೊಡುವುದಕ್ಕೆ ಇಂಡಿಯನ್ ಪೀನಲ್ ಕೋಡ್ ಇದೆ.